(ಶ್ರೀ ಎಂ. ಚಿಕ್ಕಲಿಂಗಯ್ಯ.)

Grow More Food Scheme ಪ್ರಕಾರ ಕಾರ್ಯಕ್ರಮ ನಡೆಸಲು ಹಿಡುವಳಿದಾರರು ತೆಗೆದುಕೊಂಡಿರುವುದು ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು tentative ಆಗಿ ಮಾಡಿರುತ್ತಾರೆ. ಕೆಲವು ಸಮಯದಲ್ಲಿ ಕಂದಾಯ ಕ್ಕೆ under value ಮಾಡಿರುತ್ತಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಹಾಗಾದರೆ upset price ಗೊತ್ತುಮಾಡಿದನಂತರ ಪುನಃ ಅದನ್ನು revise ಮಾಡುವುದರಿಂದ ಪಾರ್ಟಿಗೆ ಅನ್ಯಾಯವಾಗುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲಾ ನಂದರ್ಭಗಳಲ್ಲಿಯೂ ಹಾಗೆ ಮಾಡಿಲ್ಲ. Upset price ಕೇವಲ ಕಡಮೆಯಾಗಿದ್ದು ಅದರಿಂದ ಸರ್ಕಾರಕ್ಕೆ ನಷ್ಟವಾಗುವ ಸಂಭವವಿದ್ದರೆ ಆಗಮಾತ್ರವೇ revise ಮಾಡುತ್ತಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ನಿಮ್ನವರ್ಗದವರಿಗೆ ಐದು ವರ್ಷಗಳ ಅವಧಿಯ ಮೇಲೆ ಸಾಗುವಳಿಗಾಗಿ ಜಮೀನು ಕೊಟ್ಟಿರುವುದು ಪಹಣಿ ಲೆಕ್ಕದ ಆಧಾರದ ಮೇಲೆ ಅಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಪಹಣಿ ಲೆಕ್ಕದ ಆಧಾರದಮೇಲೆ ಕೊಟ್ಟಿದ್ದರೂ ಸಹ, ಅದು ಸರಿಯಾಗಿಲ್ಲವೆಂದು ಕೆಲವರು ದರಖಾಸ್ತುದಾರರೂ ಮತ್ತು ಗ್ರಾಮಸ್ಥರೂ ತಿಳಿಸುತ್ತಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಯಾವ ಆಧಾರದ ಮೇಲೆ ತಾವು ಹಿಂದಿನ ಆರ್ಡರನ್ನು revise ಮಾಡಿರುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಈ ಬಗ್ಗೆ ನಿಜಪರಿಸ್ಥಿತಿಯೇನು ಎಂಬುದನ್ನು ಮನಗಂಡು ಮಾಡಿರುತ್ತದೆ. ಇದರಿಂದೇನೂ ಅನಾಹುತವಾಗಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಇದರಿಂದ ಅನೇಕ ನಿಮ್ನವರ್ಗದವರಿಗೆ ಅನ್ಯಾಯವಾಗಿದ್ದರೆ ಅದನ್ನು ಸರಿಪಡಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅನ್ಯಾಯವಾಗಿರುವ ವಿಚಾರವನ್ನು ಗಮನಕ್ಕೆ ತಂದರೆ ಅದನ್ನು ವಿಚಾರಿಸಿ ಸರಿಪಡಿಸುತ್ತೇವೆ.

ಶ್ರೀ ಬಿ. ರಾಚಪ್ಪ.—ಸೆಂಟ್ರಲ್ ಡಿಪ್ರೆಸ್ಡ್ ಕ್ಲಾಸ್ ಸಮಿತಿಯಿಂದ ಈ ಬಗ್ಗೆ ತಮಗೇನಾದರೂ ಶಿಫಾರ್ಸು ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಬಿ. ರಾಚಪ್ಪ.—Grow More Food ಯೋಜನೆಯಬಗ್ಗೆ ಜಮೀನಿಲ್ಲದ Depressed Class ನವರಿಗೆ ಜಮೀನು ಕೊಡಬೇಕೆಂಬ ಬಗ್ಗೆ ನಿರ್ಧಾರ ಕೈಗೊಳ್ಳಲು ಸಾಧ್ಯವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದರ ಅಗತ್ಯ ಸರ್ಕಾರದವರಿಗೆ ಕಂಡುಬಂದಿಲ್ಲ.

ಶ್ರೀ ವಿ. ಮಾಸಿಯಪ್ಪ.—Grow More Food Schemeನ ಪ್ರಕಾರ ಸಾಗುವಳಿಗಾಗಿ ಜಮೀನು ಕೊಟ್ಟು ಅದನ್ನು ಪುನಃ ಅವರಿಗೆ ತಪ್ಪಿಸಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿಲ್ಲ.

ಶ್ರೀ ವಿ. ಮಾಸಿಯಪ್ಪ.—ಅಂಥಾದ್ದು ಆಗಿದ್ದರೆ ಅದನ್ನು ಸರಿಪಡಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಆ ರೀತಿ ಆಗಿರುವ ನಿದರ್ಶನಗಳನ್ನು ಸರ್ಕಾರದ ಗಮನಕ್ಕೆ ತಂದರೆ ಸರಿಪಡಿಸಲು ಪ್ರಯತ್ನಿಸುತ್ತೇವೆ.

ಶ್ರೀ ಸಿ. ಟಿ. ಹನುಮಂತಯ್ಯ.—Grow More Food Schemeಗಾಗಿ ಕೊಟ್ಟಿರತಕ್ಕ ಜಮೀನನ್ನು ಐದು ವರ್ಷಗಳ ಅವಧಿಯಾದಮೇಲೆ ಕಿತ್ತುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿಲ್ಲ.

ಶ್ರೀ ಸಿ. ಟಿ. ಹನುಮಂತಯ್ಯ.—ಈ ಬಗ್ಗೆ ಅಪೀಲು ಹಾಕಿಕೊಂಡರೆ ಪುನಃ ಅದನ್ನು ಅವರಿಗೆ ಪಾಪಸ್ಸು ಕೊಡಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ನಕಾರಣದಿಂದ ಅದನ್ನು ತೆಗೆದುಕೊಂಡಿದ್ದರೆ ಆ ಬಗ್ಗೆ ಏನು ಮಾಡಲೂ ಸಾಧ್ಯವಿಲ್ಲ.

ಶ್ರೀ ಕೆ. ಪ್ರಭಾಕರ್.—Grow More Food Schemeಗಾಗಿ ಜಮೀನು ಕೊಟ್ಟು ಅದು ಸಾಗುವಳಿದಾರರಿಗೆ ಸೇರುವ ವಿಚಾರದಲ್ಲಿ ತಡೆ ಆಗುತ್ತಿರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಆ ರೀತಿ ಆಗಿರುವ ನಂದರ್ಭಗಳನ್ನು ಗಮನಕ್ಕೆ ತಂದರೆ ತಡೆಗಟ್ಟಲು ಪ್ರಯತ್ನಿಸುತ್ತೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ರೆವೆನ್ಯೂ ಕಮಿಷನರು ಈ upset price ಬೇರೆ ಬೇರೆ ಡಿಸ್ಟ್ರಿಕ್ಟಿಗೆ ನಿಗದಿ ಮಾಡಿ ಹುಕುಂ ಕಳುಹಿಸಿದ್ದರೆ ?

ಶ್ರೀ ಕಡಿದಾಳ್ ಮಂಜಪ್ಪ.—Maximum ಮತ್ತು Minimum rate ನಿಗದಿ ಮಾಡಿರುತ್ತಾರೆ. ಈ ವಿಚಾರದಲ್ಲಿ rules violate ಮಾಡಬಾರದೆಂಬ ಬಗ್ಗೆ circular ಸಹ ಕಳುಹಿಸಿದೆ.

Hirekalale Tank (Restoration).

Q.—223. **Sri G. PUTTASWAMY** (Chikmagalur-Mudigere—Scheduled Castes).—

Will the Government be pleased to state :—

(*a*) whether it has come to their notice that the atchkatdars of Hirekalale Tank at Chikmagalur are repeatedly representing for the restoration of the tank ;

(*b*) the action taken thereon ;

(*c*) the capacity, depth and area of the tank ;

(*d*) the atchkat ;

(*e*) whether they would restore the above tank as early as possible in the interest of the raiyats ?

A.—**Sri Kadidal MANJAPPA** (Minister for Revenue and Public Works).—

(*a*) Yes.

(*b*) Detailed investigations are being conducted.

(*c*) Statement appended (*vide* Appendix). (Survey and constructing details).

(*d*) 200 acres.

(*e*) Will be considered.

STATEMENT.

Survey and constructing details for the Hirekolale Reservoir Reg. No. of Chikmagalur Taluk. River drainage, Cauvery Branch. river drainages, Hemavathi.

Series. Upper Hemavathi Sub-Series. Yagati. Serial No. position in Topo Sheet No. 480/11. Latitude 75 43 D.M. Longitude D.M. 13'21

	Survey Details.		*Remarks.*
1.	Drainage acres exclusive of tanks above	Sq. Miles ...	4'9 Sq. Miles
2.	Total acres exclusive of do	do ...	Do do
3.	Area of water spread at 650'00	Acres ...	32'68 Acres
4.	Maximum depth do	Fathoms ...	3'33 Fathoms
5.	Mean depth do	do ...	1'67¾ Fathoms
6.	Capacity 650'00 M.WL.	Units ...	66'38 Units
7.	Area of water spread at 654'00 M.WL.	Acres ...	...
8.	Capacity 654'0	Units ...	...
9.	Total irrigable area as per Revenue Survey.	Acres ...	...
10.	Total area proposed to be irrigated	do ...	...
11.	Number of tanks above	No. ...	Nil
12.	Number of tanks below	No. ...	...

	Constructive Details		*Remarks*
1.	Length of present weirs Right ft.	...	...
	Left ft.	...	...
2.	Length of proposed weirs Right ft.	...	...
	Left ft.	...	100 feet
3.	R.L. of proposed weirs	...	650'00
4.	R.L. of Bund	...	660'00
5.	R.L. of Rivetment	...	655'00
6.	Top width of bund minimum	...	10 feet
7.	Front slope	...	1½ to 1 and 2 to 1
8.	Rear slope	...	3 to 1 and 3½ to 1
9.	R. L. Proposed Sluices R. No. 1 and 2	....	630'00
10.	R. L. of No. Right B.M.	...	674'00
11.	R.L. of No. Left B.M.	...	675'62

ಶ್ರೀ ಜಿ. ಪುಟ್ಟಸ್ವಾಮಿ.—ಪರಿಶಿಷ್ಟದಲ್ಲಿ ಕೊಟ್ಟಿರುವ (c) ಭಾಗದ ಪ್ರಶ್ನೆಗೆ ಸಂಬಂಧಪಟ್ಟ ಈ ಕೆರೆಯ ಜೀರ್ಣೋದ್ಧಾರಕ್ಕಾಗಿ ಎಷ್ಟು ಎಕರೆಗಳನ್ನು ಅಕ್ವೈರ್ ಮಾಡಬೇಕೆಂದು ಉದ್ದೇಶಿಸಿದ್ದೀರಿ ?

Sri Kadidal MANJAPPA.—It is being investigated.

ಶ್ರೀ ಜಿ. ಪುಟ್ಟಸ್ವಾಮಿ.—ಸರ್ವೇ ಆಗಿದೆ ಎಂದು ಅಪ್ಪಣೆ ಆಗಿದೆ. ಸರ್ವೇ ಆದನಂತರ ಈ ಕೆರೆ ಬಡಾವಣೆಗೆ ಎಷ್ಟು ಎಕರೆಗಳನ್ನು ಅಕ್ವೈರ್ ಮಾಡುವುದಕ್ಕೆ ಉದ್ದೇಶಿಸಿರುತ್ತೀರಿ ಎಂಬುದು ನನ್ನ ಪ್ರಶ್ನೆ.

ಶ್ರೀ ಕಡಿದಾಳ್ ಮಂಜಪ್ಪ.—ಇನ್ನೂ ತನಿಖೆ ಆಗುತ್ತಾ ಇದೆ. ಎಷ್ಟು ಎಕರೆ ಅಕ್ವೈರ್ ಆಗಬೇಕು, ಎಷ್ಟು ಹಣ ಖರ್ಚಾಗುತ್ತದೆ ಎಂಬುದನ್ನು ಇನ್ನೂ ಗೊತ್ತುಮಾಡಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಈ ಕೆರೆಯನ್ನು ಜೀರ್ಣೋದ್ಧಾರ ಮಾಡುವುದರಿಂದ ಟೌನಿನ ಜನರಿಗೆ ಕುಡಿಯುವ ನೀರಿನ ಉಪಯೋಗಕ್ಕೂ ಮತ್ತು ರೈತರ ಉಪಯೋಗಕ್ಕೂ ಅನುಕೂಲವಾಗುತ್ತದೆ. ಈ ಎರಡು ಕಾರಣಗಳಿರುವುದರಿಂದ ಈ ಕಾಂಗಾರಿಯನ್ನು ಅಗತ್ಯವಾಗಿ ಜಾಗ್ರತೆ ಕೈಕೊಳ್ಳಬೇಕು ಎಂಬುದನ್ನು ಸರ್ಕಾರದವರು ಆಲೋಚನೆ ಮಾಡಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಜಾಗ್ರತೆ ಅಂದಾಜು ತಯಾರು ಮಾಡಬೇಕೆಂದು ಸರ್ಕಾರದವರು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದ್ದಾರೆ.

ಶ್ರೀ ಜಿ. ಪುಟ್ಟಸ್ವಾಮಿ.—ಎಷ್ಟು ದಿವಸಗಳಿಂದ ಇದು ಪರಿಶೀಲನೆಯಲ್ಲಿದೆ, ಸ್ವಾಮಿ ? ಚಿಕ್ಕಮಗಳೂರಿನ ಅನುಪಾನು ಗ್ರಾಮದಲ್ಲಿರುವ ಕೋಚ್ಚೆ ಕೆರೆ ಮತ್ತು ಇತರ 3-4 ಕೆರೆಗಳು ಈ ಕೆರೆಯ ಕೆಳಭಾಗದಲ್ಲಿವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ತಾವು ತಮ್ಮ ಕೇಸಿಗೆ ವಿರುದ್ಧವಾಗಿ ಹೇಳುತ್ತಾ ಇದ್ದೀರಿ. ಅದನ್ನೂ ಕೂಡ ಗಮನದಲ್ಲಿಟ್ಟುಕೊಳ್ಳುತ್ತೇವೆ.